ಧಾರಾವಾಹಿ–7

# ನಂಬಿಕೆಯ ನೂಲು

## ಸಿದ್ದಣ್ಣನ ಕಾಲೇಜು ದಿನಗಳ ಮೆಲುಕು

■ ಬಸು ಬೇವಿನಗಿಡದ
ಕಲೆ: ಎಚ್‌ಎಸ್ ಮೋನಪ್ಪ



ಬಸ್ಸು ಬಂದಿದ್ದರೆ ಇಷ್ಟೊತ್ತಿಗೆ ಊರಲ್ಲಿ ಇರಬಹುದಾಗಿತ್ತು ಎಂದುಕೊಂಡು ಯಾವಾಗ ಮನೆ ಮುಟ್ಟುವೆವೊ ಎಂದು ಇನ್ನೂ ಬಾರದ ಬಸ್ಸಿಗೆ ಶಾಪ ಹಾಕತೊಡಗಿದರು. ತಮ್ಮ ಬಾಜೂಕಿನವರಿಗೆ ‘ಯಪ್ಪಾ, ಮಲ್ಲೂರ ಗಾಡಿ ಇನ್ನೂ ಬರಲಿಲ್ಲಲ್ಲೊ? ಅದಕ್ಕೇನ ಬ್ಯಾನಿ ಬಂದೈತೊ?’ ಎಂದೋ ಇಲ್ಲವೆ ‘ಯಣ್ಣಾ, ಬಸ್ ಬಂತಂದ್ರ ಈ ಒಜ್ಜೆ ಚೀಲ ಸ್ವಲ್ಪ ಹೊರಿಸಬೇಕಪೋ’ ಎಂದು ಎದೆಯ ಹಳವಂಡವನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡಿಕೊಳ್ಳುತ್ತಿದ್ದರು. ಅಷ್ಟೊತ್ತಿಗೆ ಮಲ್ಲೂರಿನ ಪಂಚಾಯಿತಿ ಅಧ್ಯಕ್ಷಳಾಗಿದ್ದ ಮಾಯಕ್ಕ ಬೈಲಹೊಂಗಲ ಬಸ್‌ಸ್ಟ್ಯಾಂಡ್ ಒಳಗಡೆ ಹೆಜ್ಜೆಯಿಡಲು ಮಂದಿಗೆ ಬಸ್ಸು ಬಂದ ಹಿಗ್ಗಿಗಿಂತಲೂ ಹತ್ತು ಪಟ್ಟು ಹೆಚ್ಚು ಹಿಗ್ಗು ಉಂಟಾಗಿ ಒಂದು ಕ್ಷಣ ಅವರೆಲ್ಲ ಪುಳಕಿತರಾದರು.

‘ಬರ್ರಿ ಅಕ್ಕಾವ್ರ, ಬರ್ರಿ ಮೇಡಮ್, ಬಾಯ್ಯಾರು ಕುಂದ್ರತಾರ ಏಳ್ರಿ’ ಎನ್ನುವ ಧ್ವನಿಗಳು ನಾಲ್ಕಾರು ಕಡೆಯಿಂದ ಕೇಳಿಬಂದವು. ಜನರು ತಮ್ಮಷ್ಟಕ್ಕೆ ತಾವೆ ಮಾತಾಡಿಕೊಳ್ಳುತ್ತ, ಸಿಮೆಂಟ್ ಕುರ್ಚಿಯ ಮೇಲೆ ಕುಳಿತಿದ್ದವರನ್ನು ಎಬ್ಬಿಸಿ ಅಲ್ಲಿ ಮಾಯಕ್ಕನನ್ನು ಕೂಡ್ರಿಸಿದರು. ಅವಳ ಗಂಡ ಶಿವಣ್ಣ ಇನ್ನೂ ತನ್ನ ಹೆಗಲ ಮೇಲೆ ಸಂತೆಯ ಚೀಲವನ್ನು ಹೊತ್ತುಕೊಂಡೇ ಇದ್ದ. ಮಾಯಕ್ಕ ‘ಚೀಲ ಕೆಳಗಿಡ್ರಿ. ಪಾಪ ನಿಮಗ ಒಜ್ಜೆ ಆತು ಅನಸ್ತದ...’ ಎಂದು ನಗುತ್ತ ಇಸಿದುಕೊಂಡು ತನ್ನ ಬಾಜೂ ಇಟ್ಟುಕೊಂಡಳು. ಮಾಯಕ್ಕನ ನಸೀಬ ಮುಂದೆ ತಮ್ಮ ನಸೀಬನ್ನು ಹೋಲಿಸಿಕೊಂಡ ಕೆಲವು ಮಹಿಳೆಯರು ತಾವು ಅವಳ ತರಹ ಗಂಡನ ಮೇಲೆ ಭಾರ ಹೊರಿಸಿ, ಕೈಬೀಸುತ್ತ ಹೋಗುವ ಕಾಲ ಎಂದು ಬರುವುದೋ ಎಂದು ಶೂನ್ಯದತ್ತ ದೃಷ್ಟಿ ನೆಟ್ಟಿದ್ದರು. ಬಸ್‌ಸ್ಟ್ಯಾಂಡಿನಲ್ಲಿ ಸುತ್ತಲಿನ ಹಳ್ಳಿಗಳಿಗೆ ಹೊರಟು ನಿಂತಿದ್ದ ಮಂದಿ ಈಗ ಇವಳ ಸುತ್ತಲೂ ನೆರೆದರು.

‘ಈಕೀನ ಮಾಯಕ್ಕ, ಅದs ಮಲ್ಲೂರ್ ಪಂಚಾಯತಿ ಅಧ್ಯಕ್ಷ ಆದಾಕಿ. ಹೆಂಗ ಇದ್ದಾಕಿ ಹೆಂಗ ಆದ್ಲು ನೋಡ್ರಿ... ಶಿವಣ್ಣಂದು ನಸೀಬು ತೆರೀತು. ಅಂವನೂ ಚಲೊ ಆದ. ಆದರ ಅದs ಖಬರಗೇಡಿ ಸಿದ್ದಣ್ಣ, ಈಕಿ ಮೈದುನ, ಎಲ್ಲಾ ಹಾಳ ಮಾಡ್ಕೊಂತು. ಆಂವ ತನ್ನ ಕಾಲ ಮ್ಯಾಲ ತಾನs ಕಲ್ಲ ಚೆಲ್ಲಕೊಂಡ...’ ಗುಸುಗುಸು ಮಾತು ಒಂದು ತುದಿಯಿಂದ ಮತ್ತೊಂದು ತುದಿಗೆ ಕೊಂಡಿ ಜೋಡಿಸಿಕೊಳ್ಳುತ್ತಿದ್ದವು. ಮಾಯಕ್ಕಳನ್ನು ಇದುವರೆಗೆ ನೋಡದಿದ್ದವರು ನೋಡಲು ಮುಗಿಬಿದ್ದರೆ, ಅವಳ ಬಗ್ಗೆ ಹಲವಾರು ಸಂಗತಿಗಳನ್ನು ಕೇಳಿದ್ದವರು ‘ಓಹೋ, ಮಾಯಕ್ಕ ಈಕೇ ಏನು? ಗಟ್ಟಿವಾಣಿ ಹೆಣ್ಣಮಗಳು ಬಿಡಪಾ’ ಎಂದು ಕುತೂಹಲದಿಂದ ಅವಳ ಮೇಲೆ ದೃಷ್ಟಿ ನೆಟ್ಟಿದ್ದರು. ತನ್ನತ್ತಲೇ ಕಣ್ಣು ನೆಟ್ಟವರ ವರ್ತನೆಯಿಂದ ಇರುಸು ಮುರಸುಗೊಂಡ ಮಾಯವ್ವಳು ‘ನೋಡ್ರಿ ಅಣ್ಣಾ, ನಿಮ್ಮ ಬಸ್ ಬಂದಿರಬೇಕು. ಈ ಸಲ ನಿಮ್ಮೂರ ದಾರಿ ಸರಿ ಮಾಡಿಸ್ತೇನಿ, ಈ ಸಲ ನಿಮ್ಮೂರಿಗೆ ಬಸ್ ಬರುವಂಗ ಮಾಡ್ತೀನಿ, ಕುಡಿಯುವ ನೀರು ನಿಮ್ಮೂರಿಗೆ